aglasem.com

FOR KSET PREPARATION

KSET 2024 Kannada Question Paper

EXAM	YEAR	TYPE
KSET	2024	Question Paper

ಕ್ರಮ ಸಂಖ್ಯೆ

102281

ವರ್ಷನ್ ಕೋಡ್

A1

ಅರ್ಹತಾ / ಸ್ಪರ್ಧಾತ್ಮಕ ಪರೀಕ್ಷೆ – 2024
ಪತ್ರಿಕೆ–2
ಒಟ್ಟು ಪ್ರಶ್ನೆಗಳ ಸಂಖ್ಯೆ : 100
ಗರಿಷ್ಠ ಅಂಕಗಳು : 200

ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂಂದಿಸಿ

ವಿಷಯ : ಕನ್ನಡ

ಅಭ್ಯರ್ಥಿಗಳಿಗೆ ಸೂಚನೆಗಳು

ಮಾಡಿ :

1. ಕೊಠಡಿ ಮೇಲ್ವಿಚಾರಕರು ಪ್ರಶ್ನೆಪತ್ರಿಕೆಯನ್ನು ನಿಮಗೆ **ಬೆ. 9.55** ಕ್ಕೆ ಕೊಡುತ್ತಾರೆ.
2. ನೋಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳತಕ್ಕದ್ದು.
3. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಅನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
4. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮ ಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ತಪ್ಪಿಲ್ಲದೆ ಬರೆಯಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಕಡ್ಡಾಯವಾಗಿ ಸಹಿ ಮಾಡಬೇಕು.

ಮಾಡಬೇಡಿ :

- **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ & ಮಾರ್ಕನ್ನು ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.**

ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. ಪ್ರಶ್ನೆಗಳಲ್ಲಿ ಬಳಸಿರುವ signs and symbols ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.ಪೇಕು.
2. ಪ್ರಶ್ನೆಪತ್ರಿಕೆಯಲ್ಲಿ ಒಟ್ಟು **100** ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಗೂ 4 ಬಹು ಆಯ್ಕೆ ಉತ್ತರಗಳು ಇರುತ್ತವೆ. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಒಂದು ಉತ್ತರವನ್ನು ಆಯ್ಕೆ ಮಾಡಿ.
3. **ಬೆಳಿಗ್ಗೆ 10.00** ಗಂಟೆಗೆ ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ತೆಗೆದು ಈ ಪ್ರಶ್ನೆಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಅಕ್ಷರಗಳು ಬಿಟ್ಟುಹೋಗಿದ್ದಲ್ಲಿ ಪರೀಕ್ಷೆ ಪ್ರಾರಂಭವಾದ **5** ನಿಮಿಷಗಳೊಳಗೆ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು. ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. **ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.**

ಸರಿಯಾದ ಕ್ರಮ CORRECT METHOD	ತಪ್ಪು ಕ್ರಮಗಳು WRONG METHODS
① ● ③ ④	⊗ ② ③ ④ ① ② ③ ④ ① ● ● ④
	● ② ③ ④ ① ● ③ ④ ① ② ③ ④

5. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ಕಚ್ಚಾ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
7. **ಮಧ್ಯಾಹ್ನ 1.00 ಗಂಟೆಗೆ ಕೊನೆಯ ಬೆಲ್‌ಕೊನ್ ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ, ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.**
8. ಕೊಠಡಿ ಮೇಲ್ವಿಚಾರಕರು ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ (ಕಚೇರಿ ಪ್ರತಿ) ತಮ್ಮ ವಶದಲ್ಲಿ ಇಟ್ಟುಕೊಂಡು ಹಿಂಬದಿಯ ಯಥಾಪ್ರತಿಯನ್ನು (ಅಭ್ಯರ್ಥಿಯ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.
9. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳಿರುತ್ತವೆ.
10. ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.

aglasem.com For more Question Papers, Sample Papers, Notes & Syllabus visit aglasem.com

33. ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ :

ಹೇಳಿಕೆ : ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು. ಅದ ಕದ್ದು ಮೇಯದೇ ಮನವು.

ವಿವರಣೆ : ಅನುಭವವನ್ನು ನಾನು ಸವಿಯುವುದಿಲ್ಲ, ಅದರ ನೆನಪನ್ನು ಮಾತ್ರ ಸವಿಯುತ್ತೇನೆ. ಕದ್ದು ಸವಿಯುತ್ತೇನೆ.

(1) ಹೇಳಿಕೆ ಸರಿ, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ಸರಿ, ವಿವರಣೆ ತಪ್ಪು
(4) ಹೇಳಿಕೆ ತಪ್ಪು, ವಿವರಣೆ ಸರಿ

34. ಕೆ.ಎಸ್. ನರಸಿಂಹಸ್ವಾಮಿಯವರ ಕವಿತೆಗಳ ಸಂಗ್ರಹಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿ.

(1) ಉಂಗುರ, ಇರುವಂತಿಗೆ, ದೀಪದಮಲ್ಲಿ, ಶಿಲಾಲತೆ
(2) ಶಿಲಾಲತೆ, ದೀಪದಮಲ್ಲಿ, ಉಂಗುರ, ಇರುವಂತಿಗೆ
(3) ದೀಪದಮಲ್ಲಿ, ಉಂಗುರ, ಇರುವಂತಿಗೆ, ಶಿಲಾಲತೆ
(4) ಇರುವಂತಿಗೆ, ಶಿಲಾಲತೆ, ಉಂಗುರ, ದೀಪದಮಲ್ಲಿ

35. ಕಲ್ಯಾಣ ಕ್ರಾಂತಿಯನ್ನು ಕುರಿತ ಈ ಕೆಳಗಿನ ಯಾವ ನಾಟಕದಲ್ಲಿ ಬಸವಣ್ಣನವರ ಪಾತ್ರ ನೇರವಾಗಿ ಬರುವುದಿಲ್ಲ.

(1) ತಲೆದಂಡ
(2) ಕೆಟ್ಟಿತ್ತು ಕಲ್ಯಾಣ
(3) ಶಿವರಾತ್ರಿ
(4) ಮಹಾಚೈತ್ರ

36. ಕಾದಂಬರಿ ಎಂದರೆ 'ಕರತಲ ರಂಗಭೂಮಿ' ಎಂದ ಲೇಖಕರು ಯಾರು ?

(1) ಬಿ. ವೆಂಕಟಾಚಾರ್ಯ
(2) ಕುವೆಂಪು
(3) ಶಿವರಾಮ ಕಾರಂತ
(4) ಅನಕೃ

37. ಈ ಕೆಳಕಂಡ ಕಾದಂಬರಿಗಳ ಪಾತ್ರಗಳನ್ನು ಹೊಂದಿಸಿ ಬರೆಯಿರಿ :

a.	ಭವ	i.	ಲಕ್ಕ, ರುಕ್ಮಿಣಿ
b.	ವೈಶಾಖ	ii.	ಪುಟ್ಟಗೌರಿ, ಶಿವು
c.	ಒಡಲಾಳ	iii.	ನಾಗಭಟ್ಟ, ಚಂದ್ರಿಕೆ
d.	ಸಾರ್ಥ	iv.	ನಾರಾಯಣ, ಗಂಗೂ

(1) a-iii, b-ii, c-iv, d-i
(2) a-i, b-iii, c-ii, d-iv
(3) a-iv, b-i, c-ii, d-iii
(4) a-ii, b-iv, c-i, d-iii

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

38. ಈ ಕೆಳಕಂಡ ಲೇಖಕರ ನಾಟಕ ಕೃತಿಗಳನ್ನು ಹೊಂದಿಸಿ ಬರೆಯಿರಿ :

a.	ಗಿರೀಶ ಕಾರ್ನಾಡ	i.	ಗೋಕರ್ಣದ ಗೌಡಶಾನಿ
b.	ಚಂಪಾ	ii.	ಅಲ್ಲಮನ ಬಯಲಾಟ
c.	ಶ್ರೀರಂಗ	iii.	ಅಂಜುಮಲ್ಲಿಗೆ
d.	ಲಕ್ಷ್ಮೀಪತಿ ಕೋಲಾರ	iv.	ಶೋಕಚಕ್ರ

(1) a-iii, b-i, c-iv, d-ii (2) a-i, b-iv, c-ii, d-iii

(3) a-iv, b-ii, c-i, d-iii (4) a-ii, b-iii, c-iv, d-i

39. ಎಂ.ಕೆ. ಇಂದಿರಾ ಅವರ ಕಾದಂಬರಿಗಳು :

a. ಶರಪಂಜರ b. ಗಿರಿಯ ನವಿಲು

c. ತುಂಗಭದ್ರ d. ಗೆಜ್ಜೆಪೂಜೆ

(1) a ಮತ್ತು b (2) b ಮತ್ತು c (3) c ಮತ್ತು a (4) c ಮತ್ತು d

40. ಅನುಪಮ ನಿರಂಜನರ ಕೃತಿಗಳು :

a. ಮಮತೆಯ ಮಾತು b. ವಧುವಿಗೆ ಕಿವಿಮಾತು

c. ಕೇಳು ಸಖಿ d. ಕೇಳು ಕಿಶೋರಿ

(1) a ಮತ್ತು d (2) b ಮತ್ತು d (3) a ಮತ್ತು c (4) b ಮತ್ತು c

41. 'ಗ್ರಾಮಾಯಣ' ಕಾದಂಬರಿಯ ಪಾತ್ರಗಳು

a. ರಾಣಾಜೀರಾಯ b. ಗಂಗಪ್ಪ

c. ರಂಗಯ್ಯ d. ಲಕ್ಷ್ಮೀಬಾಯಿ

(1) a ಮತ್ತು b (2) a ಮತ್ತು c

(3) b ಮತ್ತು d (4) a ಮತ್ತು d

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

42. ಈ ಕೆಳಗಿನ ಆತ್ಮಕತೆಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿ :

(1) ನೆನಪು ಸಿಹಿಕಹಿ, ಸಂಜೆಗಣ್ಣಿನ ಹಿನ್ನೋಟ, ದಾರಿಸಾಗಿದೆ, ಪ್ರಾಧ್ಯಾಪಕನ ಪೀಠದಲ್ಲಿ

(2) ದಾರಿಸಾಗಿದೆ, ಪ್ರಾಧ್ಯಾಪಕನ ಪೀಠದಲ್ಲಿ, ಸಂಜೆಗಣ್ಣಿನ ಹಿನ್ನೋಟ, ನೆನಪು ಸಿಹಿಕಹಿ

(3) ಸಂಜೆಗಣ್ಣಿನ ಹಿನ್ನೋಟ, ದಾರಿಸಾಗಿದೆ, ನೆನಪು ಸಿಹಿಕಹಿ, ಪ್ರಾಧ್ಯಾಪಕನ ಪೀಠದಲ್ಲಿ

(4) ಪ್ರಾಧ್ಯಾಪಕನ ಪೀಠದಲ್ಲಿ, ನೆನಪು ಸಿಹಿಕಹಿ, ದಾರಿಸಾಗಿದೆ, ಸಂಜೆಗಣ್ಣಿನ ಹಿನ್ನೋಟ

43. ಹಾಲಳ್ಳಿಯ ಕುಟುಂಬದ ಜೀವನವನ್ನು ಚಿತ್ರಿಸಿದ ಜಡಭರತರ ನಾಟಕ

(1) ಆ ಮನಿ

(2) ಮೂಕಬಲಿ

(3) ಉದರ ವೈರಾಗ್ಯ

(4) ಸಂಸಾರ

44. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ :

a.	ಹಿಂಬಾಗಿಲು	i.	ಬಹುವ್ರೀಹಿ ಸಮಾಸ
b.	ಹೊಸಗನ್ನಡ	ii.	ಅಂಶಿ ಸಮಾಸ
c.	ಗುಡುಗು ಮಿಂಚು ಸಿಡಿಲು	iii.	ದ್ವಂದ್ವ ಸಮಾಸ
d.	ಗೆಡ್ಡೆಮೂಗ	iv.	ಕರ್ಮಧಾರಯ ಸಮಾಸ

ಸರಿಯಾದ ಉತ್ತರ :

(1) a-iii, b-i, c-ii, d-iv (2) a-ii, b-i, c-iv, d-iii

(3) a-ii, b-iv, c-iii, d-i (4) a-iv, b-iii, c-ii, d-i

45. ಈ ಮುಂದಿನವುಗಳಲ್ಲಿ ಭಾಷಾತತ್ವ ಮತ್ತು ಪ್ರತಿಪಾದಕರನ್ನು ಹೊಂದಿಸಿ :

a.	ವಯಸ್ಸು, ಲಿಂಗ, ವರ್ಗ	i.	ವಿಲಿಯಂ ಜೋನ್ಸ್
b.	ವಿಶ್ವಾತ್ಮಕ ವ್ಯಾಕರಣ	ii.	ಸಸೂರ್
c.	ಸೂಚಕ ಮತ್ತು ಸೂಚಿತ	iii.	ಚಾಮ್‌ಸ್ಕಿ
d.	ತೌಲನಿಕ ಭಾಷಾವಿಜ್ಞಾನ	iv.	ಲೆಬೊವ್

ಸರಿಯಾದ ಉತ್ತರ :

(1) a-iv, b-iii, c-ii, d-i (2) a-iii, b-ii, c-i, d-iv

(3) a-iv, b-iii, c-i, d-ii (4) a-i, b-iii, c-iv, d-ii

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

46. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆಯಲ್ಲ :

a. ಕನ್ನಡ ಭಾಷೆ ಮತ್ತು ವ್ಯಾಕರಣಗಳು : ಒಂದು ಅಧ್ಯಯನ - ಡಿ. ಎನ್. ಶಂಕರ ಭಟ್

b. ಕನ್ನಡ ಭಾಷೆಯ ಇತಿಹಾಸ - ಬಿ. ರಾಮಚಂದ್ರ ರಾವ್

c. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ - ಕೆ. ಕುಶಾಲಪ್ಪ ಗೌಡ

d. ಕನ್ನಡ ಭಾಷಾ ಚರಿತ್ರೆ - ರಾ. ಯ. ಧಾರವಾಡಕರ

(1) b ಮತ್ತು d (2) c ಮತ್ತು d (3) a ಮತ್ತು c (4) a ಮತ್ತು b

47. ಪದಗಳ ಬದಲಾವಣೆಯ ಅವಸ್ಥಾಂತರವು ಸರಿಯಾದ ಕಾಲಾನುಕ್ರಮದಲ್ಲಿ ಇರುವುದನ್ನು ಗುರುತಿಸಿ :

(1) ವಾರಣಾಸಿಯುಳ್, ಗೆಣಸು, ಹಗಲ್, ಬೆಮರು

(2) ವಾರಣಾಸಿಯುಳ್, ಹಗಲ್, ಬೆಮರು, ಗೆಣಸು

(3) ಗೆಣಸು, ವಾರಣಾಸಿಯುಳ್, ಹಗಲ್, ಬೆಮರು

(4) ಹಗಲ್, ವಾರಣಾಸಿಯುಳ್, ಬೆಮರು, ಗೆಣಸು

48. ಇವುಗಳು ಚಾಮ್‌ಸ್ಕಿಯ ಚಿಂತನೆಗಳು :

a. ಭಾಷೆ ಎಂಬುದು ಒಂದು ರಚನೆ

b. ಉತ್ಪಾದಕ ವ್ಯಾಕರಣ

c. ಏಕಕಾಲೀನ ಮತ್ತು ಬಹುಕಾಲೀನ

d. ಭಾಷಾಗ್ರಹಣ ಸಜ್ಜು

(1) a ಮತ್ತು b (2) b ಮತ್ತು d (3) a ಮತ್ತು d (4) b ಮತ್ತು c

49. ಪೂರ್ವದ ಹಳಗನ್ನಡ ಆಖ್ಯಾತ ಪ್ರತ್ಯಯದ ಸರಿಯಾದ ರೂಪವನ್ನು ಗುರುತಿಸಿ :

(1) ಒನ್, ಅರ್ (2) ಒಳ್, ಉಳ್ (3) ಓನ್, ಆರ್ (4) ಅವ್, ಅರ್

50. ತಮಿಳಿನಲ್ಲಿ ಪೂರಕ ಪ್ರಸಾರದಲ್ಲಿರುವ ಧ್ವನಿಗಳು :

(1) ಕ ಮತ್ತು ಗ

(2) ಕ ಮತ್ತು ಚ

(3) ಮ ಮತ್ತು ಚ

(4) ಪ ಮತ್ತು ಭ

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

51. ಅನುನಾಸಿಕತೆಗೆ ಪ್ರತ್ಯೇಕ ಧ್ವನಿಮಾದ ಸ್ಥಾನ ಈ ಕೆಳಗಿನ ಯಾವ ಒಳನುಡಿಯಲ್ಲಿ ಇದೆ ?

(1) ಕೋಲಾರ ಕನ್ನಡ
(2) ಹವ್ಯಕ ಕನ್ನಡ
(3) ಬೆಂಗಳೂರು ಕನ್ನಡ
(4) ಬಂಟ ಕನ್ನಡ

52. ಕವಿರಾಜ ಮಾರ್ಗದಲ್ಲಿ ಬಳಕೆಯಾಗಿರುವ ಉತ್ತರ ಮಾರ್ಗ ವಾಚಕ ಪದಗಳು

a. ನೋಡುವೆನ್, ಬೇಡುವೆನ್
b. ಬರಿಪ್ಪೆನ್, ತರಿಪ್ಪೆನ್
c. ತೋಡುವೆನ್, ಸೂಡುವೆನ್
d. ನೋಟ್ಪೆನ್, ಬೇಟ್ಪೆನ್

(1) a ಮತ್ತು d
(2) a ಮತ್ತು c
(3) b ಮತ್ತು c
(4) a ಮತ್ತು b

53. ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ :

ಹೇಳಿಕೆ : ಕನ್ನಡ ಕ್ರಿಯಾಪದಗಳೆಲ್ಲ ಕ್ರಿಯಾತ್ಮಕ ಧಾತುಗಳೇ ಆಗಿವೆ.

ವಿವರಣೆ : ಕನ್ನಡದಲ್ಲಿ ಗುಣವಚನ, ಸರ್ವನಾಮ, ನಾಮಪದಗಳೂ ಕೂಡಾ ಆಖ್ಯಾತ ಪ್ರತ್ಯಯಗಳನ್ನು ಪಡೆಯಬಹುದು, ಹೀಗಾಗಿ ದ್ರಾವಿಡ ಕ್ರಿಯಾಪದಗಳೆಲ್ಲ ಕ್ರಿಯಾಸೂಚಕ ಧಾತುಗಳಲ್ಲ.

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ಸರಿ, ವಿವರಣೆ ಸರಿ
(3) ಹೇಳಿಕೆ ತಪ್ಪು, ವಿವರಣೆ ತಪ್ಪು
(4) ಹೇಳಿಕೆ ಸರಿ, ವಿವರಣೆ ತಪ್ಪು

54. ಕಲ್ಗಿ, ತುರಾಯಿ ಲಾವಣಿಗಳ 'ಆದಿಯ ಸ್ತುತಿ' ಮತ್ತು 'ಅಂತ್ಯದ ನುಡಿ' ಗೆ ಏನೆಂದು ಕರೆಯುತ್ತಾರೆ ?

(1) ಸಖಿ - ಖ್ಯಾಲಿ
(2) ಮುದ್ರಿಕೆ - ಗೊಂದಲ
(3) ಗಣ - ಸ್ತುತಿ
(4) ನಾಂದಿ - ಪದ

55. ಗೊಂದಲಿಗ ಸಮುದಾಯವು ಆರಾಧಿಸುವ ಕುಲ ದೇವತೆ ಯಾವುದು ?

(1) ಹುಲಿಗೆಮ್ಮ
(2) ದುರುಗಮ್ಮ
(3) ಮಾರೆಮ್ಮ
(4) ಅಂಬಾಭವಾನಿ

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

56. ಕಂಸಾಳೆಯವರು ಬಳಸುವ ವಾದ್ಯಗಳು

a. ಏಕತಾರಿ b. ಗಣೆ c. ದಮ್ಮಡಿ d. ಡಮರುಗ

(1) a ಮತ್ತು b (2) b ಮತ್ತು c (3) a ಮತ್ತು c (4) a ಮತ್ತು d

57. 'ಮುಖರಿ ಸೋಗು, ಬ್ಯಾಡ್ರ ಸೋಗು, ಕುದುರಿ ಸೋಗು, ಚಿಮ್ಮಣಿ ಸೋಗು' - ಇವು ಈ ಸಮುದಾಯದ ಮನರಂಜನೆಯಾಗಿವೆ

(1) ಸಿದ್ದಿಕಿ ಸಿದ್ಧಿ (2) ತೆಲುಗು ಜಂಗಮರು

(3) ಹಾಲಕ್ಕಿ ಒಕ್ಕಲಿಗರು (4) ಸಾರುವಯ್ಯನವರು

58. ಇವು ಬಿ.ಎಸ್. ಗದ್ದಗಿಮಠ ಅವರ ಕೃತಿಗಳು :

a. ಕುಮಾರ ರಾಮನ ದುಂದುಮೆ

b. ಜೀವನ ಸಂಗೀತ

c. ಹಳ್ಳಿಯ ಹಾಡುಗಳು

d. ಕಂಬಿಯ ಹಾಡುಗಳು

(1) a ಮತ್ತು b (2) b ಮತ್ತು d (3) b ಮತ್ತು c (4) a ಮತ್ತು d

59. ಹೊಂದಿಸಿ ಬರೆಯಿರಿ :

a.	ಸ್ಮಿತ್ ಥಾಮ್ಸನ್	i.	ವಾಚಿಕ ಜಾನಪದ, ಸಾಮಾಜಿಕ ಜಾನಪದ ಆಚರಣೆಗಳು, ವಸ್ತು ಸಂಸ್ಕೃತಿ, ಜನಪದ ಕಲೆಗಳು
b.	ಬಾಗ್ಸ್	ii.	ಸಾಹಿತ್ಯ ಮತ್ತು ಕಲೆಗಳು, ನಂಬಿಕೆ-ಸಂಪ್ರದಾಯ ಆಚರಣೆ, ಕೈಕಸಬುಗಳು, ಭಾಷೆ ಅಥವಾ ಜನಪದ ನುಡಿ
c.	ಫ್ರಾನ್ಸಿಸ್ ಲೀ ಅಟ್ಲಿ	iii.	ಸಾಹಿತ್ಯಿಕ, ಭಾಷಿಕ, ವೈಜ್ಞಾನಿಕ, ಕ್ರಿಯಾತ್ಮಕ
d.	ರಿಚರ್ಡ್ ಡಾರ್ಸನ್	iv.	ಶಾಬ್ದಿಕ ಜಾನಪದ ಮತ್ತು ಆಚರಣೆಗಳು
		v.	ವಸ್ತು ಮತ್ತು ರೂಪ

ಸರಿಯಾದ ಉತ್ತರ :

(1) a-iv, b-iii, c-ii, d-i (2) a-iii, b-ii, c-i, d-iv

(3) a-v, b-i, c-ii, d-iii (4) a-iv, b-ii, c-i, d-iii

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

60. ಇವು ಜಿ.ಶಂ. ಪರಮಶಿವಯ್ಯನವರು ಸಂಪಾದಿಸಿದ ಕೃತಿಗಳು :

a. ದೊಂಬಿದಾಸರ ಲಾವಣಿಗಳು

b. ನಾಡ ಪದಗಳು

c. ಪಿರಿಯಾಪಟ್ಟಣದ ಕಾಳಗ

d. ಹೆಳವರು ಮತ್ತು ಅವರ ಕಾವ್ಯಗಳು

(1) a ಮತ್ತು b

(2) a ಮತ್ತು d

(3) a ಮತ್ತು c

(4) c ಮತ್ತು d

61. ಹೊಂದಿಸಿ ಬರೆಯಿರಿ :

ಪಟ್ಟಿ I		*ಪಟ್ಟಿ II*	
a.	ರಾಗೌ	i.	ಉತ್ತರ ಕರ್ನಾಟಕದ ಒಗಟುಗಳು
b.	ವಿವೇಕ ರೈ	ii.	ಸಾವಿರದ ಒಗಟುಗಳು
c.	ಎಂ.ಎಸ್. ಲಠ್ಠೆ	iii.	ತುಳು ಒಗಟುಗಳು
d.	ಸೋಮಶೇಖರ ಇಮ್ರಾಪುರ	iv.	ನಮ್ಮ ಒಗಟುಗಳು
		v.	ಭಾರತೀಯ ಒಗಟುಗಳು

ಸರಿಯಾದ ಉತ್ತರ :

(1) a-iv, b-iii, c-i, d-ii

(2) a-ii, b-iii, c-i, d-iv

(3) a-iii, b-iv, c-ii, d-i

(4) a-i, b-ii, c-iii, d-iv

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

62. ಹೊಂದಿಸಿ ಬರೆಯಿರಿ :

	ಪಟ್ಟಿ I		*ಪಟ್ಟಿ II*
a.	ಕಿಳ್ಳೇಕ್ಯಾತರು	i.	ಅಂಟಿಗೆ ಪಂಟಿಗೆ
b.	ಕಾಡುಗೊಲ್ಲರು	ii.	ಡೊಳ್ಳುಕುಣಿತ
c.	ಮಲೆನಾಡಿಗರು	iii.	ಎರವರ ಕುಣಿತ
d.	ಕುರುಬರು	iv.	ಮೋಡಿ ಆಟ
		v.	ತೊಗಲುಗೊಂಬೆ ಆಟ

ಸರಿಯಾದ ಉತ್ತರ :

(1) a-ii, b-iii, c-i, d-iv
(2) a-i, b-ii, c-iii, d-iv
(3) a-iv, b-ii, c-i, d-iii
(4) a-v, b-iv, c-i, d-ii

63. ಇವರು ಜಾನಪದ ಸಿದ್ಧಾಂತದ ಚಾರಿತ್ರಿಕ ಭೌಗೋಳಿಕ ಪ್ರತಿಪಾದಕರು :

a. ಲಿಯೊನಾರ್ಡ್ ಕೋಹ್ಲರ್
b. ಜೂಲಿಯಸ್ ಕ್ರಾಹ್ನ್
c. ಈಲಿಯಸ್ ಲೊನ್ರಾಟ್
d. ವಿ.ಜೆ. ಪ್ರಾಪ್

(1) a ಮತ್ತು d
(2) b ಮತ್ತು c
(3) a ಮತ್ತು b
(4) a ಮತ್ತು c

64. ಗ್ರಂಥ ಸಂಪಾದನೆಯ ಪರಿಭಾಷೆಯಲ್ಲಿ 'colophon' ಎಂದರೆ :

(1) ಸಂಕ್ಷಿಪ್ತ ಪಠ್ಯ
(2) ಸಂದಿಗ್ಧ ಪಠ್ಯ
(3) ಸಮಾಪ್ತಿ ವಾಕ್ಯ
(4) ಸಮಗ್ರ ಪಠ್ಯ

65. "ರುದ್ರನ ಕೃತಿಯೊಳು ಬಿದ್ದ ತಪ್ಪುಗಳನ್ನು ತಿದ್ದಲು ದೋಷ ನಾಶನವು ! ಕ್ಷುದ್ರದಿಂ ಕೃತಿಮಾನುಬದ್ಧ ಮಾಡಲು ಆಗ ಹೊದ್ದಿ ಬಿಡದು ಭವಭವದಿ" - ಈ ಮಾತುಗಳು ಇವರನ್ನು ಕುರಿತು ಹೇಳಿದವು:

(1) ಲಿಪಿಕಾರ
(2) ಅನುವಾದಕ
(3) ವ್ಯಾಖ್ಯಾನಕಾರ
(4) ಟೀಕಾಕಾರ

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

66. ಹೊಂದಿಸಿ ಬರೆಯಿರಿ :

ಪಟ್ಟಿ I		*ಪಟ್ಟಿ II*	
a.	ಹಳಗನ್ನಡ ವ್ಯಾಕರಣ ಸೂತ್ರಗಳು	i.	ಪ್ರ.ಗೋ. ಕುಲಕರ್ಣಿ
b.	ಕನ್ನಡ ಮಧ್ಯಮ ವ್ಯಾಕರಣ	ii.	ಟಿ.ವಿ. ವೆಂಕಟಾಚಲ ಶಾಸ್ತ್ರೀ
c.	ಭಾರತೀಯ ಛಂದಶಾಸ್ತ್ರ	iii.	ತೀ.ನಂ. ಶ್ರೀಕಂಠಯ್ಯ
d.	ಕನ್ನಡ ಛಂದಃಸ್ವರೂಪ	iv.	ಆರ್.ಎಫ್. ಕಿಟೆಲ್
		v.	ಕೆ. ಕುಶಾಲಪ್ಪ ಗೌಡ

(1) a-v, b-ii, c-iv, d-iii

(2) a-iii, b-ii, c-i, d-iv

(3) a-iv, b-iii, c-i, d-ii

(4) a-ii, b-iii, c-v, d-iv

67. ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ಅಲ್ಲ?

a. ಕಣ್ಗೊಪ್ಪಲ್ ಮಸಜಂ ಸತಂತಗಮುಮಾ - ಮತ್ತೇಭ ವಿಕ್ರೀಡಿತಂ

b. ಸಭರಂ ನಂ ಮಯಲಂಗಮುಂ - ಶಾರ್ದೂಲ ವಿಕ್ರೀಡಿತ

c. ತೋರಲ್ ಮರಂಭನಂ ಮೂಯಗಣಮುಮದೆ ತಾಂ - ಸ್ರಗ್ಧರಾ

d. ಸತತಂ ನಂಸಂರರಂಗಂ ನೆಱೆದೆಸೆಯೆ - ಮಹಾಸ್ರಗ್ಧರಾ

(1) a ಮತ್ತು b

(2) b ಮತ್ತು c

(3) c ಮತ್ತು d

(4) a ಮತ್ತು d

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

68. ಹೊಂದಿಸಿ ಬರೆಯಿರಿ :

	ಪಟ್ಟಿ I		*ಪಟ್ಟಿ II*
a.	ವೃಷಭಪ್ರಾಸ	i.	ಪದ್ಯದ ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಒಂದು ವ್ಯಂಜನಕ್ಕಾಗಲಿ ಅನೇಕ ವ್ಯಂಜನಗಳಿಗಾಗಲಿ ಹಿಂದೆ ಅನುಸ್ವಾರವಿರಲು...
b.	ಗಜಪ್ರಾಸ	ii.	ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಸಜಾತೀಯ ಪ್ರಾಸ ಬರಲು...
c.	ಅಶ್ವಪ್ರಾಸ	iii.	ಪ್ರತಿಪಾದದ ಒಂದು ಮತ್ತು ಎರಡನೆಯ ಸ್ವರಗಳ ನಡುವೆ ಒಂದು ವ್ಯಂಜನ ಬಂದು ಅದರ ಹಿಂದಿನ ಸ್ವರವು ದೀರ್ಘವಾಗಿರುವ ಪ್ರಾಸ
d.	ಶರಭಪ್ರಾಸ	iv.	ಎರಡು ವ್ಯಂಜನಗಳ ಸಂಯೋಗವುಳ್ಳ ಪ್ರಾಸ
		v.	ಪದ್ಯದ ಪ್ರತಿಪಾದದಲ್ಲಿ ಬರದೆ ಎರಡು ಸಾಲುಗಳಿಗೊಮ್ಮೆ ಬರುವ ಪ್ರಾಸ

(1) a-i, b-iii, c-ii, d-iv
(2) a-ii, b-iii, c-v, d-iv
(3) a-iv, b-iii, c-v, d-i
(4) a-ii, b-iv, c-v, d-i

69. ಇವು ಪ್ರಮುಖ ವೈದಿಕ ಛಂದಸ್ಸುಗಳು :

a. ಅನುಷ್ಟುಪ್
b. ತ್ರಿಷ್ಟುಬ್
c. ಮಾಲಿನಿ
d. ಲಘುಮಾಲಿನಿ

(1) a ಮತ್ತು c
(2) b ಮತ್ತು d
(3) a ಮತ್ತು b
(4) b ಮತ್ತು c

70. ತೆಲುಗು ಮೂಲದಿಂದ ಬಂದ ಹಾಗೆ ತೋರುವವೆನ್ನಲಾದ ಮಟ್ಟುಗಳು :

a. ದ್ವಿಪದಿ
b. ಮಲ್ಲಿಕಾಮಾಲೆ
c. ಮದನವತಿ
d. ಸೀಸ

(1) a ಮತ್ತು c
(2) a ಮತ್ತು b
(3) b ಮತ್ತು c
(4) a ಮತ್ತು d

ಕಚ್ಚಾ ಕೆಲಸಕ್ಕೆ ಸ್ಥಳ

71. 'ಪ್ರಧೂಮನ ಕ್ರಿಯೆ' (Fumigation) ಎನ್ನುವುದು :

(1) ಹಸ್ತಪ್ರತಿಗಳನ್ನು ನಾಶಮಾಡುವ ಕೀಟಗಳ ನಾಶಕ್ಕಾಗಿ ಬಳಸುವ ತಂತ್ರ

(2) ಮಸಿ ಮಾಡುವ ವಿಧಾನ

(3) ಹಸ್ತಪ್ರತಿಗಳನ್ನು ಸಿದ್ಧಪಡಿಸುವ ವಿಧಾನ

(4) ತೈಲ ಸಂರಕ್ಷಣೆಯ ವಿಧಾನ

72. 'ಮೇಲ್ವಾಡು' ಪದ್ಯಜಾತಿಯ ಉಲ್ಲೇಖವಿರುವ ಗ್ರಂಥ

(1) ಕಾವ್ಯಾವಲೋಕನ (2) ಛಂದೋದರ್ಪಣ

(3) ಛಂದೋಂಬುಧಿ (4) ನಂದಿ ಛಂದೋರ್ಣವ

73. ಹೊಂದಿಸಿ ಬರೆಯಿರಿ :

ಪಟ್ಟಿ I	*ಪಟ್ಟಿ II*
a. ಸಂಜ್ಞಾಪ್ರಕರಣ	i. ತೃತೀಯಾಧಿಕಾರ
b. ಸಮವೃತ್ತವಿವರಣ	ii. ಚತುರ್ಥಾಧಿಕಾರ
c. ಮಾಲಾವೃತ್ತಾರ್ಧ ಸಮವಿಷಮಾದಿ ವೃತ್ತ ಪ್ರಕರಣ	iii. ದ್ವಿತೀಯಾಧಿಕಾರ
d. ಕಂದಾದಿ ಮಾತ್ರಾ ವೃತ್ತ ಪ್ರಕರಣ	iv. ಪ್ರಥಮಾಧಿಕಾರ
	v. ಪಂಚಮಾಧಿಕಾರ

ಸರಿಯಾದ ಉತ್ತರ :

(1) a-iv, b-iii, c-i, d-ii (2) a-ii, b-iii, c-i, d-iv

(3) a-i, b-ii, c-iii, d-iv (4) a-iv, b-iii, c-ii, d-v

74. ಟಿ.ಎಸ್. ಎಲಿಯಟ್‌ನ ಕಾವ್ಯ ಕುರಿತ ಎರಡು ಪ್ರಮುಖ ಲೇಖನಗಳು.

a. ಪರಂಪರೆ ಮತ್ತು ವ್ಯಕ್ತಿ ಪ್ರತಿಭೆ

b. ವಿಮರ್ಶೆಯ ಕಾರ್ಯ

c. ಸಾಹಿತ್ಯ ವಿಮರ್ಶೆಯ ತತ್ವಗಳು

d. ಸೌಂದರ್ಯ ಮೀಮಾಂಸೆ ಮತ್ತು ಕಾವ್ಯಮಿಮಾಂಸೆ

(1) a ಮತ್ತು b (2) b ಮತ್ತು c

(3) c ಮತ್ತು d (4) a ಮತ್ತು d

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

75. ಹೊಂದಿಸಿ ಬರೆಯಿರಿ :

ಪಟ್ಟಿ I		*ಪಟ್ಟಿ II*	
a.	ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್	i.	ಶಬ್ದಮಣಿದರ್ಪಣ
b.	ಮೃದು ಮಧುರ ವಚನ ರಚನೆಯೊಳ್ ಉದಾತ್ತಮರ್ಥ	ii.	ಸಿದ್ಧರಾಮಚಾರಿತ್ರ
c.	ಬಯಲು ಬಲಿದಾಕಾರವಾದಂತಿಹ ಮಹಾಂತ	iii.	ಕವಿರಾಜಮಾರ್ಗ
d.	ದೋಷವಿದೂರಮುಮಾಗಿ ಮೆಚ್ಚಿ ಕೈಕೊಳ್ವುದಿದಂ	iv.	ಆದಿಪುರಾಣ
		v.	ಸೋಮೇಶ್ವರ ಶತಕ

(1) a-iii, b-ii, c-iv, d-i

(2) a-ii, b-iv, c-iii, d-v

(3) a-iii, b-iv, c-ii, d-i

(4) a-iv, b-iii, c-i, d-ii

76. ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ :

ಹೇಳಿಕೆ : ಪ್ರತೀಯಮಾನಂ ಪುನರನ್ಯದೇವ
ವಸ್ತ್ವಸ್ತಿ ವಾಣೀಷು ಮಹಾಕವೀನಾಂ.

ವಿವರಣೆ : ಮಹಾಕವಿಗಳ ವಾಣಿಯಲ್ಲಿ ವಾಚ್ಯಾರ್ಥಕ್ಕಿಂತ ಬೇರೆಯಾಗಿ ಅರಿವಿಗೆ ಬರುವ ಅರ್ಥವು ಇರುತ್ತದೆ.

(1) ಹೇಳಿಕೆ ಸರಿ, ವಿವರಣೆ ಸರಿ

(2) ಹೇಳಿಕೆ ಸರಿ, ವಿವರಣೆ ತಪ್ಪು

(3) ಹೇಳಿಕೆ ತಪ್ಪು, ವಿವರಣೆ ಸರಿ

(4) ಹೇಳಿಕೆ ತಪ್ಪು, ವಿವರಣೆ ತಪ್ಪು

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

77. ಹೊಂದಿಸಿ ಬರೆಯಿರಿ :

ಮೀಮಾಂಸಕ		ಕೃತಿ	
a.	ಹೊರೆಸ್	i.	Peri Hu Psous
b.	ಲಾಂಜಿನಸ್	ii.	Ars Poetica
c.	ಮ್ಯಾಥ್ಯೂಆರ್ನಾಲ್ಡ್	iii.	Republic
d.	ಪ್ಲೇಟೋ	iv.	The Study of criticism
		v.	Defense of Poetry

ಸರಿಯಾದ ಉತ್ತರ :

(1) a-ii, b-i, c-iv, d-iii (2) a-i, b-ii, c-iii, d-iv

(3) a-ii, b-i, c-iii, d-v (4) a-iii, b-i, c-ii, d-iv

78. ಕೋಲ್‌ರಿಜ್ ಹೇಳುವ 'Primary Imagination' ಯಾವುದಕ್ಕೆ ಸಂಬಂಧಿಸಿದೆ ?

(1) ಕವಿಯ ಅನುಭವಕ್ಕೆ ಕಾರಣವಾಗುವ ಪ್ರತಿಭೆ

(2) ಕವಿಯ ಅನುಭವ ಕಲೆಯಲ್ಲಿ ಬರುವುದು

(3) ಕವಿಯ ಅನುಭವ ಹಾಗೂ ಕಲೆ ಏಕತ್ರ ಇರುವುದು

(4) ಕಲೆಯಲ್ಲಿ ವ್ಯಕ್ತವಾಗುವ ಪ್ರತಿಭೆ

79. 'ಧ್ವನಿ ವಿರೋಧಿಗಳು' ಎಂದು ಈ ಲಾಕ್ಷಣಿಕರನ್ನು ಕರೆಯುತ್ತಾರೆ :

a. ಮುಕುಲಭಟ್ಟ

b. ಭಟ್ಟನಾಯಕ

c. ರುದ್ರಟ

d. ಕುಂತಕ

e. ಭಾಮಹ

ಸರಿಯಾದ ಉತ್ತರ :

(1) b, c ಮತ್ತು e (2) a ಮತ್ತು b

(3) b ಮತ್ತು e (4) c ಮತ್ತು d

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

80. ಪ್ರಾಚೀನ ಕನ್ನಡ ಕವಿಗಳು ಕಾವ್ಯದಲ್ಲಿ ಬಳಸಿದ ಭಾಷೆಯ ಬಳಕೆಯ ರೀತಿ.

(1) ಮಾರ್ಗ ಶೈಲಿ
(2) ಮಾರ್ಗ-ದೇಸಿ ಸಮನ್ವಯ ಶೈಲಿ
(3) ಜಾನಪದ ಶೈಲಿ
(4) ಸಂಸ್ಕೃತ ಭೂಯಿಷ್ಠ ಶೈಲಿ

81. ಈ ಕೃತಿಗಳನ್ನು ಕಾಲಾನುಕ್ರಮದಲ್ಲಿ ಗುರುತಿಸಿ.

(1) ಅನುಭವಮುಕುರ, ಕಾವ್ಯಾವಲೋಕನ, ಶಬ್ದಮಣಿದರ್ಪಣ, ಶಬ್ದಾನುಶಾಸನ
(2) ಶಬ್ದಮಣಿದರ್ಪಣ, ಕಾವ್ಯಾವಲೋಕನ, ಶಬ್ದಾನುಶಾಸನ, ಅನುಭವಮುಕುರ
(3) ಕಾವ್ಯಾವಲೋಕನ, ಅನುಭವಮುಕುರ, ಶಬ್ದಮಣಿದರ್ಪಣ, ಶಬ್ದಾನುಶಾಸನ
(4) ಶಬ್ದಮಣಿದರ್ಪಣ, ಕಾವ್ಯಾವಲೋಕನ, ಅನುಭವಮುಕುರ, ಶಬ್ದಾನುಶಾಸನ

82. ಈ ಮುಂದಿನವುಗಳಲ್ಲಿ ಕಾವ್ಯವನ್ನು ಕುರಿತು ಸ್ಯಾಮ್ಯುಯೆಲ್ ಜಾನ್ಸನ್ ತಳೆದ ನಿಲುವು ಯಾವುದು ?

a. ಕಲ್ಪನೆಗೆ ಹೆಚ್ಚು ಸ್ವಾತಂತ್ರ್ಯವಿತ್ತು, ಲೌಕಿಕದಿಂದ ದೂರ ಇರುವುದು
b. ಬುದ್ಧಿಗೆ ಸಹಾಯಕವಾಗಿ, ಕಲ್ಪನೆಯನ್ನು ಬಳಸಿ ಸತ್ಯ ಮತ್ತು ಆನಂದದ ಸಂಯೋಗ ಮಾಡುವುದು
c. ವಿಚಾರಗಳಿಗೆ ಪ್ರಾಧಾನ್ಯತೆ ಇರುವ ಕಾವ್ಯವು ಮುಖ್ಯ
d. ಮಹೋನ್ನತ ವಿಚಾರಗಳಿದ್ದು-ಅವುಗಳ ನಿರೂಪಣೆಯಾಗಿ ಕಾವ್ಯ ಇರಬೇಕು

(1) a ಮತ್ತು b
(2) b ಮಾತ್ರ
(3) c ಮತ್ತು d
(4) a ಮಾತ್ರ

83. ತಮಿಳಿನ 'ಅಗಂ', 'ಪುರಂ' - ಪರಿಕಲ್ಪನೆಗಳು ಹೊಂದಿರುವ ವಸ್ತು :

(1) ಪ್ರೇಮ, ಶೌರ್ಯ
(2) ಪ್ರೇಮ, ವೈರಾಗ್ಯ
(3) ಕಾಮ, ಹೋರಾಟ
(4) ಗ್ರಾಮ, ಪಟ್ಟಣ

84. ವಡ್ಡಾರಾಧನೆ ಕೃತಿ ಮತ್ತು ಕರ್ತೃವಿನ ಬಗೆಗೆ ಹೆಚ್ಚಿನ ಸಂಶೋಧನೆ ನಡೆಸಿ 'ಆರಾಧನಾ ಕರ್ಣಾಟ ಟೀಕಾ' ಹಾಗೂ 'ಬ್ರಾಜಿಷ್ಣು' ಎಂದು ಹೇಳಿದವರು

(1) ಡಿ. ಎಲ್. ನರಸಿಂಹಾಚಾರ್
(2) ಟಿ. ಕೇಶವಭಟ್ಟ
(3) ಆ.ನೇ. ಉಪಾಧ್ಯೆ
(4) ಹಂ.ಪ. ನಾಗರಾಜಯ್ಯ

85. 'ಅನ್ಯವಾಗಿಸುವಿಕೆ' ಎಂಬ ಆಲೋಚನೆಯ ಚಿಂತಕರು :

(1) ಗ್ರಾಮ್ಷಿ
(2) ಫ್ಯಾನನ್
(3) ಸಿಮೊನ್-ದ-ಬುವಾ
(4) ಎಡ್ವರ್ಡ್ ಸೈದ್

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

86. 'ವಿಸ್ಮೃತಿಯ ಪರಿಕಲ್ಪನೆ' ಎಂದರೆ :

a. ಒಂದು ಸಮಾಜ ತನ್ನ ಗತಕಾಲವನ್ನು ಗ್ರಹಿಸುವ ಸಾಮರ್ಥ್ಯ ಕಳೆದುಕೊಳ್ಳುವುದು

b. ದೇಶಿ ಪರಂಪರೆಯ ಬಗ್ಗೆ ಅರಿವನ್ನು ನಾಶ ಮಾಡುವಿಕೆ

c. ತೃತೀಯ ಜಗತ್ತಿನ ಬಗ್ಗೆ ವ್ಯಾಖ್ಯಾನಗಳನ್ನು ತೀರ್ಮಾನಿಸುವುದು

d. ಪ್ರಾಚ್ಯವನ್ನು ಭಿನ್ನವಾಗಿ ನೋಡುವ ಕ್ರಮ

(1) a ಮತ್ತು b (2) b ಮತ್ತು c

(3) c ಮತ್ತು d (4) a ಮತ್ತು d

87. ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ :

ಹೇಳಿಕೆ : ಭಾಷೆಯಲ್ಲಿನ ಶಬ್ದ ಮತ್ತು ಅರ್ಥವು ಸ್ಥಿರವಲ್ಲದ ಕೇವಲ ಸೂಚನಾಕ್ರಮದ ಕೊನೆಯಿಲ್ಲದ ಆಟ.

ವಿವರಣೆ : ಈ ಸಂಕಥನದ ಲಕ್ಷಣಗಳು ಎಲ್ಲಾ ಕ್ಷೇತ್ರಕ್ಕೂ ಸಮಾನವಾಗಿವೆ.

(1) ಹೇಳಿಕೆ ಸರಿ, ವಿವರಣೆ ತಪ್ಪು (2) ಹೇಳಿಕೆ ತಪ್ಪು, ವಿವರಣೆ ಸರಿ

(3) ಹೇಳಿಕೆ ತಪ್ಪು, ವಿವರಣೆ ತಪ್ಪು (4) ಹೇಳಿಕೆ ಸರಿ, ವಿವರಣೆ ಸರಿ

88. ಅಧಿಕಾರ ಮತ್ತು ಜ್ಞಾನದ ನಡುವಿನ ಸಂಬಂಧವನ್ನು ಕುರಿತು ಚಿಂತಿಸಿದ ಚಿಂತಕ ಯಾರು ?

(1) ರೋಲಾ (2) ಡೆರಿಡಾ (3) ಫುಕೋ (4) ಸಸೂರ್

89. 'ನಾಗವರ್ಮ ಜನ್ನನ ಗುರು ಅಲ್ಲ, ಸುಮನೋಬಾಣನೆ ಗುರು. ಕೇಶಿರಾಜ ಜನ್ನನ ಸೋದರಳಿಯನಲ್ಲ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ವಿದ್ವಾಂಸರು ಯಾರು?

(1) ಎಂ.ಎಂ. ಕಲಬುರ್ಗಿ (2) ಡಿ.ಎಲ್. ನರಸಿಂಹಾಚಾರ್

(3) ಗೋವಿಂದ ಪೈ (4) ಎಂ. ಚಿದಾನಂದಮೂರ್ತಿ

90. ಇವು ಕನ್ನಡದ ಅಭಿನಂದನಾ ಗ್ರಂಥಗಳು :

a. ಉಪಾಯನ ಮತ್ತು ಇಳಿದು ಬಾ ತಾಯಿ

b. ಸರೋವರದ ಸಿರಿಗನ್ನಡಿಯಲ್ಲಿ ಮತ್ತು ಸಮಾಲೋಕನ

c. ಮಣಿಹ ಮತ್ತು ದೀವಿಗೆ

d. ಕರ್ಮಯೋಗಿ ಮತ್ತು ನಟಸಾರ್ವಭೌಮ

(1) a ಮತ್ತು d (2) c ಮತ್ತು d

(3) b ಮತ್ತು c (4) a ಮತ್ತು c

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

91. ಇವು ಸಂಶೋಧನಾ ಕೃತಿಗಳು :

a. ಸಂಭಾವನೆ ಮತ್ತು ನಡೆದು ಬಂದ ದಾರಿ

b. ಕವಿರಾಜಮಾರ್ಗದ ವಿವೇಕ ಮತ್ತು ನಾಡೋಜ ಪಂಪ

c. ಜ್ಞಾಪಕ ಚಿತ್ರಶಾಲೆ ಮತ್ತು ಅಲ್ಲಮನ ವಚನ ಚಂದ್ರಿಕೆ

d. ಹೊಸತು-ಹೊಸತು ಮತ್ತು ಕನ್ನಡ ಛಂದೋವಿಕಾಸ

(1) a ಮತ್ತು c (2) b ಮತ್ತು d (3) b ಮತ್ತು c (4) a ಮತ್ತು d

92. ಹೊಂದಿಸಿ ಬರೆಯಿರಿ :

ಪಟ್ಟಿ I	*ಪಟ್ಟಿ II*
a. ಮ್ಯಾಕ್ ಬೆತ್	i. ಬಹದ್ದೂರ್ ಗಂಡ
b. ದ ಟೇಮಿಂಗ್ ಆಫ್ ದ ಶ್ರೂ	ii. ರಾಮವರ್ಮ-ಲೀಲಾವತಿ
c. ರೋಮಿಯೋ ಜ್ಯೂಲಿಯಟ್	iii. ಪ್ರತಾಪರುದ್ರದೇವ
d. ಟೆಂಪೆಸ್ಟ್	iv. ಅಶ್ವತ್ಥಾಮನ್
	v. ಬಿರುಗಾಳಿ

(1) a-i, b-ii, c-iii, d-iv (2) a-iii, b-i, c-ii, d-v

(3) a-ii, b-iii, c-iv, d-v (4) a-iii, b-iv, c-v, d-i

93. ಜಿ.ಎಸ್. ಶಿವರುದ್ರಪ್ಪನವರ 'ಪರಂಪರೆ ಮತ್ತು ರಾಘವಾಂಕ ಪ್ರತಿಭೆ' ಲೇಖನದ ಮೇಲೆ ಪ್ರಭಾವ ಬೀರಿರುವ ಪಾಶ್ಚಾತ್ಯ ವಿಮರ್ಶಕ ಯಾರು ?

(1) ಟಿ.ಎಸ್. ಎಲಿಯಟ್ (2) ಐ.ಎ. ರಿಚರ್ಡ್ಸ್

(3) ಎಫ್.ಆರ್. ಲಿವಿಸ್ (4) ನಾರ್ಥ್ರೊ ಫ್ರಾಮ್

94. ಕಾಳಿದಾಸನ 'ಶಾಕುಂತಲ' ನಾಟಕವನ್ನು ಕನ್ನಡಕ್ಕೆ ಮೊದಲು ಅನುವಾದಿಸಿದವರು

(1) ಬಸವಪ್ಪ ಶಾಸ್ತ್ರಿಯವರು

(2) ದೊಂಡೋ ನರಸಿಂಹ ಮುಳಬಾಗಿಲ

(3) ಸೋಸಲೆ ಅಯ್ಯಾ ಶಾಸ್ತ್ರಿಗಳು

(4) ಚುರುಮರಿ ಶೇಷಗಿರಿ ರಾಯರು

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

95. ಹೊಂದಿಸಿ ಬರೆಯಿರಿ :

a.	ಒರೆಗಾನ್ ವಿಶ್ವವಿದ್ಯಾಲಯ	i.	ಇಯರ್ ಬುಕ್ ಆಫ್ ಕಂಪ್ಯಾರಿಟಿವ್ ಕ್ರಿಟಿಸಿಸಂ
b.	ಇಲಿನಾಯ್ಸ್ ವಿಶ್ವವಿದ್ಯಾಲಯ	ii.	ಕಂಪ್ಯಾರಿಟಿವ್ ಲಿಟರೇಚರ್
c.	ಇಂಡಿಯಾನ ವಿಶ್ವವಿದ್ಯಾಲಯ	iii.	ಕಂಪ್ಯಾರಿಟಿವ್ ಲಿಟರೇಚರ್ ಸ್ಟಡೀಸ್
d.	ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯ	iv.	ಇಯರ್ ಬುಕ್ ಆಫ್ ಕಂಪ್ಯಾರಿಟಿವ್ ಅಂಡ್ ಜನರಲ್ ಲಿಟರೇಚರ್

(1) a-ii, b-iii, c-iv, d-i

(2) a-iii, b-iv, c-i, d-ii

(3) a-iv, b-ii, c-iii, d-i

(4) a-i, b-ii, c-iii, d-iv

96. 'ತುಳಸಿ', 'ಸಂಭಾ', 'ನಾರ್ಸಾ', 'ತುಕ್ಯಾ' - ಈ ಪಾತ್ರಗಳು ಕೆಳಗಿನ ಯಾವ ಕೃತಿಯಲ್ಲಿ ಬರುತ್ತವೆ ?

(1) ಅಕ್ರಮ ಸಂತಾನ

(2) ಉಚಲ್ಯಾ

(3) ನಡುವೆ ಸುಳಿಯುವ ಆತ್ಮ

(4) ಮರುಭೂಮಿಯ ಹೂವು

97. ಮರಾಠಿಯ 'ಯಯಾತಿ' ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದವರು ಯಾರು ?

(1) ವಿ.ಎಂ. ಇನಾಂದಾರ

(2) ಉತ್ತಂಗಿ ಚನ್ನಪ್ಪ

(3) ಯಶವಂತ ಚಿತ್ತಾಲ

(4) ಬಿ.ಸಿ. ರಾಮಚಂದ್ರ ಶರ್ಮ

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

98. ಹರಿನಾರಾಯಣ ಆಪ್ಟೆಯವರ 'ಗಡ ಅಲಾ ಪಣ ಸಿಂಹ ಗೇಲಾ' ಎಂಬ ಕಾದಂಬರಿಯನ್ನು ಗಳಗನಾಥರು ಹೀಗೆ ಅನುವಾದಿಸಿದ್ದಾರೆ.

(1) ಮಾಧವ ಕರುಣಾ ವಿಲಾಸ

(2) ಮರಾಠರ ಅಭ್ಯುದಯ

(3) ಕಮಲ ಕುಮಾರಿ

(4) ಕ್ಷಾತ್ರ ತೇಜ

99. 'ಸರವಣನ್' ಪಾತ್ರವಿರುವ ಅನುವಾದಿತ ಕನ್ನಡ ಕೃತಿ ಯಾವುದು ?

(1) ಯುದ್ಧ ಮುತ್ತು ಶಾಂತಿ

(2) ನಾನು ಅವನಲ್ಲ ಅವಳು

(3) ಕೆಂಪು ಮೀನು

(4) ಅಕ್ರಮ ಸಂತಾನ

100. ಇವು ಮರಾಠಿಯಿಂದ ಕನ್ನಡಕ್ಕೆ ಅನುವಾದವಾದ ಕೃತಿಗಳು :

a. ಕುರುಕ್ಷೇತ್ರ

b. ಯಮುನಾಬಾಯಿಯ ಸಂಚಾರ

c. ಪ್ರಮೀಳಾರ್ಜುನೀಯಂ

d. ಹೇಮಚಂದ್ರ ವಿಲಾಸ

(1) b ಮತ್ತು c

(2) c ಮತ್ತು d

(3) a ಮತ್ತು c

(4) a ಮತ್ತು b

ಕಚ್ಚಾ ಕೆಲಸಕ್ಕೆ ಸ್ಥಳ

aglasem.com For more Question Papers, Sample Papers, Notes & Syllabus visit aglasem.com

ELIGIBILITY/ COMPETITIVE EXAM – 2024
PAPER–2
TOTAL NUMBER OF QUESTIONS : 100
MAXIMUM MARKS : 200

MENTION YOUR REGISTER NUMBER

Version Code

A1

Subject : KANNADA

INSTRUCTIONS FOR CANDIDATES

DOs :


1. This question booklet is issued to you at **9.55 a.m.** by the room invigilator.
2. Check whether the Register Number has been entered and shaded in the respective circles on the OMR answer sheet.
3. The Version Code of this question booklet should be entered on the OMR answer sheet and the respective circles should also be shaded completely.
4. The Version Code and Serial Number of this question booklet should also be entered on the Nominal Roll without any mistakes.
5. Compulsorily sign at the bottom portion of the OMR answer sheet in the space provided.

DONTs :

- **THE TIMING AND MARKS PRINTED ON THE OMR ANSWER SHEET SHOULD NOT BE DAMAGED / MUTILATED / SPOILED.**

IMPORTANT INSTRUCTIONS TO CANDIDATES

1. In case of usage of signs and symbols in the questions, the regular textbook connotation should be considered unless stated otherwise.
2. This question booklet contains **100** questions and each question will have one statement and four different options / responses and out of which you have to choose one correct answer.
3. At **10.00 a.m.** remove the paper seal of this question booklet and check that this booklet does not have any unprinted or torn or missing pages or items etc., if so, get it replaced by a complete test booklet within **5** minutes of the commencement of exam. Read each item and start answering on the OMR answer sheet.
4. Completely **darken / shade** the relevant circle with a **blue or black ink ballpoint pen against the question number on the OMR answer sheet.**



5. Please note that even a minute unintended ink dot on the OMR answer sheet will also be recognized and recorded by the scanner. Therefore, avoid multiple markings of any kind on the OMR answer sheet.
6. Use the space provided on each page of the question booklet for Rough Work. Do not use the OMR answer sheet for the same.
7. **Once the last Bell rings at 1.00 P.M., stop writing on the OMR answer sheet and hand over the OMR answer sheet to the room invigilator as it is.**
8. After separating the top sheet (Office copy), the invigilator will return the bottom sheet replica (Candidate's copy) to you.
9. All questions carry equal marks.
10. Use of Mobile Phones, Calculators and other Electronic / Communication gadgets of any kind is prohibited inside the Examination venue.

aglasem.com For more Question Papers, Sample Papers, Notes & Syllabus visit aglasem.com